Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 14-07-2022

□□□□□□□□ □□□□□□□□:

## ಆರೋಗ್ಯಕರ ಮನಸ್ಸು ಹಾಗೂ ಆರೋಗ್ಯಕರ ದೇಹ ಉಪನ್ಯಾಸ ಕಾರ್ಯಕ್ರಮ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದಲ್ಲಿ ಮಹಿಳಾ ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿನಿಯರ ಮಾನಸಿಕ ಹಾಗೂ ದೈಹಿಕ ಆರೋಗ್ಯಾಭಿವೃದ್ಧಿಗೆ " **ಆರೋಗ್ಯಕರ ಮನಸ್ಸು ಹಾಗೂ ಆರೋಗ್ಯಕರ ದೇಹ**" ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಜುಲೈ 14ರಂದು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಳಿಯಾಳದ ಮನಃ ಶಾಸ್ತ್ರಜ್ಞೆ ಶ್ರೀಮತಿ ಸಂಗೀತ ಬಿ ಪ್ರಭು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಉತ್ತಮವಾದ ಮನಸ್ಥಿತಿಯಿಂದ ದೈಹಿಕ ಆರೋಗ್ಯ ಹೊಂದಬಹುದು. ಆರೋಗ್ಯಕರ ಆಹಾರ ಸೇವನೆ ಮತ್ತು ಒಳ್ಳೆಯ ಹವ್ಯಾಸಗಳಿಂದ ಉತ್ತಮ ಜೀವನ ರೂಪಿಸಿಕೊಳ್ಳಬಹುದೆಂದು ನುಡಿದರು. ಸಾಮಾಜಿಕ ಜಾಲತಾಣದಲ್ಲಿ ವಿದ್ಯಾರ್ಥಿನಿಯರು ಅನಗತ್ಯವಾಗಿ ಗುರುತಿಸಿಕೊಂಡು ಭವಿಷ್ಯಕ್ಕೆ ಮಾರಕವಾಗದಿರದಂತೆ ಎಚ್ಚರಿಕೆ ವಹಿಸಬೇಕೆಂದು ಕರೆ ನೀಡಿದರು. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ವಿ.ಎ. ಕುಲಕರ್ಣಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಹಾವಿದ್ಯಾಲಯವು ವಿದ್ಯಾರ್ಥಿನಿಯರಿಗಾಗಿಯೇ ಒದಗಿಸಿರುವ ವಿಶೇಷ ಸೌಲಭ್ಯಗಳಾದ ಪಿಂಕ್ ಬಸ್, ಹಾಸ್ಟೆಲ್ಗಳಲ್ಲಿ ಉಚಿತ ವೈ-ಫೈ ಕುರಿತು ವಿವರಿಸಿದರು.

ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಮೀನಲ್ ಕೆ ಸ್ವಾಗತಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ. ಪೂರ್ಣಿಮಾ ಆರ್ ವಂದಿಸಿದರು. ಪ್ರೊ. ಶ್ರೀಗೌರಿ ಹಾಗೂ ಕುಮಾರಿ. ಐಶ್ವರ್ಯ ನಿರೂಪಿಸಿದರು. ಮಹಾವಿದ್ಯಾಲಯದ ಮಹಿಳಾ ಸಿಬ್ಬಂದಿಗಳು ಹಾಗೂ 200 ಅಧಿಕ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮಹಾವಿದ್ಯಾಲಯದ ಮಹಿಳಾ ವಿಭಾಗ ಹಾಗೂ ಐ.ಸಿ.ಸಿ. ಯ ಜಂಟಿ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಪ್ರಾಂಶುಪಾಲರು
Principal
KLS Vishwanathrao Deshpande
Institute of Technology, Haliyal


KLS VDIT
INTERNAL COMPLAINTS COMMITTEE (ICC) in association with WOMEN CELL organises
COUNSELLING session for Girl Students
"Healthy Mind for Healthy Life"
KLS
VDIT


KLS
KARNATAK LAW SOCIETY's

